# ಅಂಧರ ಕಾರು ರ‍್ಯಾಲಿಯಲ್ಲಿ..

■ ಎನ್.ಸಿದ್ದರಾಜಯ್ಯ

ನಗರಗಳಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯಲ್ಲಿ ಅಪಘಾತಗಳನ್ನು ಮಾಡಿಕೊಳ್ಳದೆ ವಾಹನ ಚಾಲನೆ ಮಾಡಿ ಗುರಿ ತಲುಪಬೇಕೆಂದರೆ ಚಾಲಕರು ಮೈಯೆಲ್ಲಾ ಕಣ್ಣಾಗಿರಬೇಕು! ಆದರೆ ಕಣ್ಣೇ ಇಲ್ಲದವರು ರ‍್ಯಾಲಿಯಲ್ಲಿ ಕಾರು ಓಡಿಸುವುದು ಹೇಗೆ?

ಹೌದು, ಓಡಿಸಿದ್ದಾರೆ– ಮೈಸೂರಿನಲ್ಲಿ! ಇದನ್ನು ಸಾಧ್ಯವಾಗಿಸಿದ್ದು ಮೈಸೂರು ರ‍್ಯಾಲಿ ಡಾಟ್ ಕಾಮ್. 'ಅಂಧರು ಕಾರು ಓಡಿಸಿದ್ರಾ!?' ಎಂದು ಹೌಹಾರಬೇಡಿ; ಅವರು ಕಾರು ಓಡಿಸಲು ದಾರಿ ತೋರಿದರು.

ಮೈಸೂರು ರ‍್ಯಾಲಿ ಡಾಟ್ ಕಾಮ್, ಅಂಧರ ರಾಷ್ಟ್ರೀಯ ಒಕ್ಕೂಟ (ಎನ್ ಎಫ್‌ಬಿ) ಮತ್ತು ಎನ್.ರಂಗರಾವ್ ಅಂಡ್ ಸನ್ಸ್ ಸಹಯೋಗದೊಂದಿಗೆ ಮೈಸೂರಿನಲ್ಲಿ ಇತ್ತೀಚೆಗೆ ಅಂಧರ ಮಾರ್ಗದರ್ಶನದಲ್ಲಿ ಕಾರು ರ‍್ಯಾಲಿ ನಡೆಯಿತು.

### ರ‍್ಯಾಲಿ ರೂಲ್ಸ್

ಸ್ಪರ್ಧೆಯಲ್ಲಿ ಭಾಗವಹಿಸುವ ಒಂದು ಕಾರಿನಲ್ಲಿ ನಾಲ್ಕು ಮಂದಿ ಇರುತ್ತಾರೆ. ಅದರಲ್ಲಿ ಒಬ್ಬಾಕೆ ಅಥವಾ ಒಬ್ಬ ಅಂಧರು. ಸಾಮಾನ್ಯ ಚಾಲಕ ಮತ್ತು ಇಬ್ಬರು ಸಹಾಯಕರಿರುತ್ತಾರೆ. 50 ಮಾರ್ಗಸೂಚಿ (ರೂಟ್ ಮ್ಯಾಪ್) ಒಳಗೊಂಡ ಬ್ರೈಲ್ ಲಿಪಿಯ ಹಾಳೆಯನ್ನು ಕಾರು ಹೊರಡುವ ಮುನ್ನ ಅಂಧನಿಗೆ ನೀಡಲಾಗುತ್ತದೆ. ಅದನ್ನು ಅಂಧ ಓದಿ ಸೂಚಿಸಿದಂತೆ (ಉದಾ: ಎಲ್ಲಿ ಎಡಕ್ಕೆ, ಬಲಕ್ಕೆ ತಿರುಗಬೇಕು...) ಅವನ ಮಾರ್ಗದರ್ಶನದಲ್ಲಿ ಚಾಲಕ ಕಾರನ್ನು ಚಾಲನೆ ಮಾಡಬೇಕು.

ಸೂಚನೆಗಳ ಜೊತೆಯಲ್ಲಿ ಕಾರು ಚಲಿಸುವ ಮಾರ್ಗದಲ್ಲಿ ಬರುವ ಸ್ಥಳಗಳ ಬಗ್ಗೆ 10 ಪ್ರಶ್ನೆಗಳನ್ನು ನೀಡಲಾಗಿರುತ್ತದೆ. ಅದಕ್ಕೆ ಚಾಲಕ ಉತ್ತರಿಸಬೇಕು. ಅದಕ್ಕೆ 10 ಪಾಯಿಂಟ್ ಇರುತ್ತದೆ. ಟಿಎಸ್‌ಡಿ (ಟೈಮ್–ಸ್ಪೀಡ್–ಡಿಸ್ಟೆನ್ಸ್) ನಿಯಮದ ಪ್ರಕಾರ ನಡೆದ ರ‍್ಯಾಲಿಯಲ್ಲಿ 50 ಕಿ.ಮೀ. ಗಮ್ಯವನ್ನು 2 ಗಂಟೆಯಲ್ಲಿ ತಲುಪುವ ಗುರಿ ನೀಡಲಾಗಿತ್ತು. ಇಲ್ಲಿ ಕೇವಲ ವೇಗ ಮುಖ್ಯವಲ್ಲ, ವೇಗ ಮಿತಿ, ಸಮಯವೂ ಮುಖ್ಯ. ಕಾರಿನ ವೇಗ ಮಿತಿಯನ್ನು ಗಂಟೆಗೆ ಗರಿಷ್ಠ 30 ಕಿ.ಮೀ.ಗೆ ನಿಗದಿಗೊಳಿಸಲಾಗಿತ್ತು.

### ಬೆಳಕು ತೋರಿದ ಅಂಧರು

ಅಂಧರ ಮಾರ್ಗದರ್ಶನದಲ್ಲಿ ಕಾರು ಚಾಲನೆ ಮಾಡಲು ಮೈಸೂರಿನ ಹಲವರು ತಮ್ಮ ಕಾರಿನೊಂದಿಗೆ ಉತ್ಸುಕತೆಯಿಂದ ಆಗಮಿಸಿದ್ದರು. ಮಾರುತಿ 800, ಆಲ್ಟೋ, ಅಂಬಾಸಿಡರ್, ಸ್ಯಾಂಟ್ರೋ, ಮಾರುತಿ ಸುಜುಕಿ, ಸ್ವಿಫ್ಟ್ ಮುಂತಾಗಿ ಒಟ್ಟು 34 ಕಾರುಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು. ರಾಜಕುಮಾರಿ ದೊಡ್ಡಮನೆ ಆಶ್ರಮ, ರಂಗರಾವ್ ಸ್ಮಾರಕ ಅಂಧ ಹೆಣ್ಣು ಮಕ್ಕಳ ವಸತಿ ಶಾಲೆ ಹಾಗೂ ನ್ಯಾಷನಲ್ ಫೆಡರೇಷನ್ ಆಫ್ ಬ್ಲೈಂಡ್ಸ್ ಸಂಸ್ಥೆಯಿಂದ 34 ಅಂಧರು (20 ಮಹಿಳೆಯರು, 14 ಪುರುಷರು) ಭಾಗವಹಿಸಿದ್ದರು.

ಜೆಕೆ ಮೈದಾನದಿಂದ ಆರಂಭಗೊಂಡ ಕಾರು ರ‍್ಯಾಲಿ ರೈಲ್ವೇ ಸ್ಟೇಷನ್, ರಾಮಸ್ವಾಮಿ ವೃತ್ತ, ಆರ್‌ಟಿಓ ವೃತ್ತ, ಮಾನಸಗಂಗೋತ್ರಿ, ಹುಣಸೂರು ರಸ್ತೆ, ಕಾಳಿದಾಸ ರಸ್ತೆ, ರಿಂಗ್ ರೋಡ್, ಇನ್ಫೋಸಿಸ್, ಬನ್ನೂರು ರಸ್ತೆ, ಲಲಿತ ಮಹಲ್, ಚಾಮುಂಡಿ ಬೆಟ್ಟದ ಮೂಲಕ ಸಾಗಿ ಸಿಎಆರ್ ಮೈದಾನದಲ್ಲಿ ಮುಕ್ತಾಯಗೊಂಡಿತು.

ಮಾರ್ಗದುದ್ದಕ್ಕೂ ಬ್ರೈಲ್ ಲಿಪಿಯಲ್ಲಿನ ಮಾರ್ಗಸೂಚಿಗಳನ್ನು ಅಂಧರು ಓದಿ ಚಾಲಕನಿಗೆ ಕರಾರುವಾಕ್ಕಾಗಿ ಸೂಚನೆ ನೀಡುತ್ತಿದ್ದರು. ಜೊತೆಗೆ ಸ್ಥಳಗಳ ಬಗ್ಗೆ ಮಧ್ಯೆ ಮಧ್ಯೆ ಪ್ರಶ್ನೆಗಳನ್ನು ಕೇಳಿ ಉತ್ತರವನ್ನೂ ಪಡೆಯುತ್ತಿದ್ದರು. ಹೀಗೆ ಅಂಧ ಸ್ಪರ್ಧಿಗಳಿಂದ ಸ್ಫೂರ್ತಿ ಪಡೆದುಕೊಂಡ ಚಾಲಕರು ಚಾಕಚಕ್ಯತೆಯಿಂದ ಕಾರನ್ನು ಓಡಿಸಿ ಯಶಸ್ವಿಯಾಗಿ ಗುರಿ ಮುಟ್ಟಿ, ಪ್ರಶಸ್ತಿಯನ್ನು ಗಿಟ್ಟಿಸಿಕೊಂಡರು.

### ಅಂಧರ ಕಣ್ಣಲ್ಲಿ ಮೈಸೂರು!

'ಜಗತ್ತಿನ ಮೂಲೆ ಮೂಲೆಯಿಂದ ಪ್ರವಾಸಿಗರು ಆಗಮಿಸಿ ಮೈಸೂರಿನ ಚಿತ್ರಣವನ್ನು ಕಣ್ತುಂಬಿಕೊಳ್ಳುತ್ತಾರೆ. ಆದರೆ ಇದರಿಂದ ವಂಚಿತರಾಗಿರುವ ಅಂಧರಿಗೂ ಮೈಸೂರಿನ ಸೊಬಗನ್ನು ಕಟ್ಟಿಕೊಡಬೇಕು, ಜೀವನ ಪ್ರೀತಿ ಬೆಳೆಸಬೇಕು ಎಂಬ ಉದ್ದೇಶದಿಂದ ಕಾರು ರ‍್ಯಾಲಿಯನ್ನು ಮೈಸೂರು ನಗರದಲ್ಲಿ ಏರ್ಪಡಿಸಲಾಗಿದೆ' ಎನ್ನುತ್ತಾರೆ ರ‍್ಯಾಲಿ ರೂವಾರಿ ಪ್ರದೀಪ್.

ಮೈಸೂರಿನವರೇ ಆದ ಪ್ರದೀಪ್ ಡಿಪ್ಲೊಮಾ (ಆಟೋಮೊಬೈಲ್) ಪದವೀಧರರು. ಇವರು ಮಹೀಂದ್ರ ಸ್ಕಾರ್ಪಿಯೊ ಕಂಪೆನಿಯಲ್ಲಿ ಸ್ಪೆಷಲ್ ನೇವಿಗೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರು (2008), ಚೆನ್ನೈ (2009), ಮುಂಬೈ (2011) ಸೇರಿದಂತೆ ಮುಂತಾದ ಕಡೆ ನಡೆದ ಕಾರು ರ‍್ಯಾಲಿಗಳಲ್ಲಿ ಭಾಗವಹಿಸಿ ಅನುಭವ, ಪರಿಣಿತಿ ಪಡೆದುಕೊಂಡಿದ್ದಾರೆ. ಕಾರು ರ‍್ಯಾಲಿಗೆ ಸ್ಫೂರ್ತಿ ದೊರೆತದ್ದು ತನ್ನ ಅಂಧ ಸ್ನೇಹಿತ ಶಿವಕುಮಾರ್ ಅವರಿಂದ ಎನ್ನುತ್ತಾರೆ.



ಮೈಸೂರಿನ ರಂಗರಾವ್ ಸ್ಮಾರಕ ಅಂಧ ಹೆಣ್ಣು ಮಕ್ಕಳ ವಸತಿ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಶಾಂತಿಗೆ ಈ ರ‍್ಯಾಲಿಯ ಅನುಭವ ಹೊಸತು. 'ಅಂಧೆಯಾದ ನಾನು ರ‍್ಯಾಲಿಯಲ್ಲಿ ಭಾಗವಹಿಸುವುದು ಹೇಗೆ? ಅಪರಿಚಿತ ಪುರುಷರ ಜೊತೆ ಕಾರಿನಲ್ಲಿ ಹೋಗುವುದು ಹೇಗೆ? ಎಂದು ಆತಂಕಗೊಂಡಿದ್ದೆ. ಆದರೆ ರ‍್ಯಾಲಿಯಲ್ಲಿ ಭಾಗವಹಿಸಿದಾಗ ತಂಡದ ಸದಸ್ಯರೆಲ್ಲ ಕುಟುಂಬದ ಸದಸ್ಯರಂತೆ ನೋಡಿಕೊಂಡರು. ತಂಡದ ಸದಸ್ಯರ ನಡುವೆ ಉತ್ತಮ ಹೊಂದಾಣಿಕೆ ಇತ್ತು. ನಾನು ಬ್ರೈಲ್ ಲಿಪಿಯನ್ನು ಓದಿ ಮಾರ್ಗದರ್ಶನ ಮಾಡುತ್ತಿದ್ದೆ. ಚಾಲಕರು ಉತ್ಸಾಹದಿಂದ ಕಾರು ಚಾಲನೆ ಮಾಡಿದರು. ಇದರಿಂದ ನಮ್ಮ ತಂಡಕ್ಕೆ ಮೊದಲ ಬಹುಮಾನ ಬಂತು' ಎಂದು ಶಾಂತಿ ಖುಷಿಯಿಂದ ಹೇಳಿದರು. ಅವರ ಪ್ರಕಾರ, ಆತ್ಮವಿಶ್ವಾಸ, ಸಾಹಸ ಮನೋಭಾವ ಮತ್ತು ಕ್ರೀಡಾ ಸ್ಫೂರ್ತಿ ತುಂಬುವಲ್ಲಿ ಇಂತಹ ರ‍್ಯಾಲಿಗಳು ಅವಶ್ಯಕ.